ಅಂದ. ಅಷ್ಟೊತ್ತಿಗಾಗಲೇ ಲವಕುಶ, ಚಂದ್ರಹಾಸ, ಭಕ್ತಪ್ರಹ್ಲಾದ ಈ ಕಥೆಗಳನ್ನು ಕೇಳಿದ್ದೆ. ನನ್ನ ಮನಸ್ಸಲ್ಲೂ ಇದ್ದವು. ನಾಟಕಗಳನ್ನು ಮಾಡ್ತಾ ಇದ್ನಲ್ಲ. ನನಗೆ ಅನುಭವವಿತ್ತು. ನಾಟಕದ ಹಾಡುಗಳನ್ನು ಹಾಡ್ತಾ ಇದ್ದೆ. ದೇವರನಾಮಗಳಿಗಿಂತ ನಾಟಕದ ಹಾಡುಗಳೇ ಮೈತುಂಬ ಇದ್ವು ನಂಗೆ.

‘ಆಯ್ತು, ನಾನು ಹರಿಕಥೆ ಮಾಡಿ ತೋರಿಸುತ್ತೇನೆ’ ಅಂತ ಹೇಳ್ದೆ. ಆಗ ನನಗೆ ಸಹಾಯ ಮಾಡಿದೋರು ಬಿ.ಸಿ. ಸಿದ್ಧನಂಜಪ್ಪ ಅಂತ ಹಿಂದಿ ಮೇಷ್ಟ್ರು. ಅವರಿಗೆ ‘ಇಂಗಾಯ್ತು ಸರ್’ ಅಂದೆ. ‘ಅದುಕ್ಕೆ ಯಾಕೆ ಯೋಚನೆ ಮಾಡ್ತಿಯಾ? ಬಾ ಇಲ್ಲಿ ಗಣಪತಿ ಪೆಂಡಾಲ್‌ನಲ್ಲಿ ಸಾಯಂಕಾಲ ಮಾಡಿಸಿಬಿಡಾನ’ ಅಂದರು. ವೈ. ಸದಾಶಿವಯ್ಯ ಅಂತ ಮುನ್ಸಿಪಲ್ ಪ್ರೆಸಿಡೆಂಟ್ ಆಗಿದ್ರು ಆಗ ಕೊರಟಗೆರೆಯಲ್ಲಿ. ಅವರದು ‘ಎಸ್‌ಎಸ್‌ಆರ್’ ಅಂತ ಬಹಳ ಪ್ರಸಿದ್ಧ ಹೋಟೆಲ್ ಇತ್ತು. ಈಗ ಇಲ್ಲ ಅದು. ಆ ಹೊಟೇಲ್ ಹತ್ರ ಸಿದ್ಧನಂಜಪ್ಪ ಅವರು ನನ್ನನ್ನು ಕರೆದುಕೊಂಡು ಹೋಗಿ ಸದಾಶಿವಯ್ಯ ಅವರಿಗೆ ವಿಷಯ ತಿಳಿಸಿದ್ರು. ಅದಕ್ಕೆ ಅವರು ‘ಹೇ ಮಾಡ್ಲಿಬಿಡಿ ಸ್ವಾಮಿ’ ಅಂದ್ರು.

ಹೊಸಕೋಟೆಯವರು, ಸಂಜೀವಯ್ಯ ಅಂತ ಹಾರ್ಮೋನಿಯಂ ನುಡಿಸ್ತಿದ್ರು. ನನಗೆ ಸಂಬಂಧಿ ಆಗ್ಬೇಕು. ಅವರನ್ನು ಕಂಡು ‘ನೋಡಪ್ಪ, ನಾನು ಹರಿಕಥೆ ಮಾಡ್ಬೇಕು. ಅದುಕ್ಕೆ ನೀನು ಹಾರ್ಮೋನಿಯಂ ನುಡಿಸ್ಬೇಕು’ ಅಂದೆ. ಅವರು ಒಪ್ಪಿಕೊಂಡ್ರು. ತಬಲಕ್ಕೆ ಆಂಜಿನಪ್ಪ ಅಂತ ಇದ್ರು. ಈಗ ಸಿನಿಮಾದಲ್ಲಿ ‘ತಬ್ಲಾ ನಾಣಿ’ ಅಂತ ಇದಾರಲ್ಲ, ಅವರ ಅಪ್ಪ. ಮಹಾನ್ ತಬಲಾ ವಾದಕರು. ಅವರ ಇಡೀ ಮನೆಯೇ ಸಂಗೀತದ ಮನೆಯಾಗಿತ್ತು ಆ ಕಾಲಕ್ಕೆ. ಸಿದ್ದಪ್ಪ ಅಂತ ಅವರಣ್ಣ ಘಂಟಸಾಲ ಹಾಡೋಹಾಗೆ ಹಾಡ್ತಿದ್ರು. ಅವನ ಹತ್ರ ಒಪ್ಪಿ ಬಂದು ಗಣಪತಿ ಪೆಂಡಾಲ್‌ನಲ್ಲಿ ನಿಂತುಕೊಂಡೇ ಬಿಟ್ಟೆ.



ಹರಿಕಥೆಗೆ ಹೊಸಬಟ್ಟೆ ತೊಟ್ಟೆ. ಪಂಚೆ, ಪೇಟ, ನಾಮ ಬಳಿದುಕೊಂಡು ನಿಂತುಕೊಂಡು ‘ಲವಕುಶ’ ಕಥೆ ಮಾಡಲು ಶುರು ಮಾಡಿದೆ. ಜನರೆಲ್ಲ ಖುಷಿಯಿಂದ ಕೇಳಿದ್ರು. ಅದನ್ನು ಮುಗಿಸಿ ಬೆಳಿಗ್ಗೆ ಆಫೀಸ್‌ಗೆ ಹೋದಾಗ ಅಷ್ಟೊತ್ತಿಗಾಗಲೇ ನನ್ನನ್ನು ಹಂಗಿಸಿದ್ದ ಮೇಷ್ಟ್ರಿಗೆ ವಿಷಯ ಗೊತ್ತಾಗಿ ಹೋಗಿತ್ತು. ‘ಏನೋ ಮಾತಿನ ನಡುವೆ ಅಂಗೆ ಅಂದಿದ್ದೀನಿ ಅಷ್ಟೇ. ಅದೇ ನಿನಗೆ ಶ್ರೇಷ್ಠ ಅಂತ ಕಂಡ್ರೆ ನಿನಗೆ ಒಳ್ಳೆದಾಗುತ್ತದೆ ಹೋಗು’ ಅಂದ್ರು. ಅದುನ್ನೇ ನಾನು ಮುಂದುವರಿಸಿಕೊಂಡು ಯಾಕೆ ಹೋಗಬಾರದು ಅಂತ ನಿರ್ಧರಿಸಿ, ಕೊರಟಗೆರೆಯಲ್ಲಿ ಇದ್ದಾಗಲೇ ಅಲ್ಲೇ ಪ್ರಥಮವಾಗಿ ಹರಿಕಥಾ ಕೀರ್ತನೆ ಶುರುಮಾಡಿ, ತಾಲ್ಲೂಕಿನ ತುಂಬೆಲ್ಲಾ ಸುತ್ತಾಡಿದೆ. ಪಾತಗಾನಹಳ್ಳಿ, ವಜ್ಜನಕುರಿಕೆ, ತೋವಿನಕೆರೆ, ಸಿದ್ಧರಬೆಟ್ಟ, ತುಂಬಾಡಿ ಎಲ್ಲ ಕಡೆ ಹರಿಕಥೆ ಮಾಡಿದೆ. ಅಷ್ಟೊತ್ತಿಗೆ, ಪೌರಾಣಿಕ ನಾಟಕಗಳಿಗೂ ಪಾತ್ರ ಮಾಡಂಗಾದೆ. ‘ರಾಮಾಯಣ’, ‘ಸುಭದ್ರಾ ಪರಿಣಯ’, ‘ದಾನಶೂರ ಕರ್ಣ’, ‘ಕಾಳಿದಾಸ’... ದೊಡ್ಡದೊಡ್ಡ ನಾಟಕಗಳು, ಕಂಪನಿ ನಾಟಕಗಳು. ಹೀಗೆ ಹರಿಕಥಾ ಪಯಣದಲ್ಲಿ ಲಕ್ಷ್ಮಣದಾಸ್ ಆದೆ.

ಕಂಪನಿ ನಾಟಕಗಳಲ್ಲಿ ಮುಸುರಿ ಕೃಷ್ಣಮೂರ್ತಿಯವರು ಸಿಕ್ಕಿಬಿಟ್ರು ನನಗೆ. ಆಗಿನ ಕಾಲಕ್ಕೆ ಮುಸುರಿ ಕೃಷ್ಣಮೂರ್ತಿ ಎಲ್ಲ ಪಾತ್ರಗಳಲ್ಲೂ ಸೈ ಎನ್ನಿಸಿಕೊಳ್ಳುತ್ತಿದ್ರು. ಇಂಥ ಪಾತ್ರ ಮಾಡಲ್ಲ ಅಂತ ಹೇಳುತ್ತಿರಲಿಲ್ಲ. ಸಿನಿಮಾಕ್ಕೆ ಹೋದರು ಆಮೇಲೆ. ಸಿನಿಮಾಕ್ಕೆ ಹೋದ ಮೇಲೆ ನಾಟಕದಷ್ಟು ಸಿನಿಮಾ ಕ್ಲಿಕ್ ಆಗಲಿಲ್ಲ. ಒಂದು ಗಳಿಗೇನೂ ಪುರುಸೊತ್ತು ಇರಲಿಲ್ಲ. ನಾಟಕದ ಪಾತ್ರ ಮಾಡಲು ಟೈಂ ಸಿಕ್ತಾ ಇರಲಿಲ್ಲ ಅವರಿಗೆ. ಅದುಕ್ಕೆ ಬಿಟ್ಟುಬಿಟ್ರು. 1975ರಿಂದ 1985ರವರೆಗೆ ಹತ್ತೇ ವರ್ಷದಲ್ಲಿ ನೂರಾರು ಪಾರ್ಟ್ ಮಾಡುದ್ರು. ರಂಗಭೂಮಿಯಲ್ಲಿ